ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಕ್ರಮಾಂಕ: ಮಂ.ವಿ/ಶೈಕ್ಷಣಿಕ/ಸಿಆರ್-3/2018-19/ಎ7

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574 199

ದಿನಾಂಕ: 11/1/2019

## <u>ಸುತ್ತೋಲೆ</u>

ವಿಷಯ: ಶೈಕ್ಷಣಿಕ ವರ್ಷ 2018-19ನೇ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸುಗಳ ಎರಡನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ Open Elective ಪತ್ರಿಕೆಯ ಹಂಚಿಕೆ ಬಗ್ಗೆ.

ಉಲ್ಲೇಖ: ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 01-01-2019.

*******

ಶೈಕ್ಷಣಿಕ ವರ್ಷ 2018-19ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟ ಕಾಲೇಜುಗಳಲ್ಲಿ/ ವಿಭಾಗಗಳಲ್ಲಿ ನಡೆಸುವ ಸ್ನಾತಕೋತ್ತರ ಕೋರ್ಸುಗಳ ಎರಡನೇ ಸೆಮಿಸ್ಟರಿನ ವಿದ್ಯಾರ್ಥಿಗಳ Open Elective ಪತ್ರಿಕೆ ಹಂಚಿಕೆಯ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. ಆದಾಗ್ಯೂ, Open Elective ಪತ್ರಿಕೆಯನ್ನು ಬದಲಾಯಿಸಲು ಇಚ್ಛಿಸುವ ವಿದ್ಯಾರ್ಥಿಗಳಿಂದ **ದಿನಾಂಕ 14.01.2019 ರಂದು ಅಪರಾಹ್ನ 2.00 ಗಂಟೆಯ** ಒಳಗೆ ಸಂಬಂಧಪಟ್ಟ ವಿಭಾಗಗಳು/ ಕಾಲೇಜುಗಳ ಪ್ರಾಂಶುಪಾಲರುಗಳು ಅರ್ಜಿಯನ್ನು ಭರ್ತಿಮಾಡಿಸಿಕೊಂಡು **ದಿನಾಂಕ 14.01.2019 ರಂದು 5.00 ಗಂಟೆಯ ಒಳಗೆ** ವಿದ್ಯಾರ್ಥಿಗಳ ಮಾಹಿತಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://mangaloreuniversity.ac.in/open-elective ನಲ್ಲಿರುವ online form ನಲ್ಲಿ ಭರ್ತಿಮಾಡತಕ್ಕದ್ದು. ಬದಲಾವಣೆ ಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ, ಈ ಹಿಂದೆ ಹಂಚಿಕೆಯಾಗಿರುವ Open Elective ಪತ್ರಿಕೆ ರದ್ದಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು <u>https://mangaloreuniversity.ac.in/open-elective</u> ನಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ **<u>ದಿನಾಂಕ 17-01-2019 ರಂದು (ಗುರುವಾರ) ಪೂರ್ವಾಹ್ನ 10.30 ಗಂಟೆಗೆ</u>** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಹಳೆ ಸೆನೆಟ್ ಹಾಲ್‌ನಲ್ಲಿ Open Elective ಪತ್ರಿಕೆಯ ಎರಡನೇ ಹಂತದ ಕೌನ್ಸಿಲಿಂಗ್ ಪ್ರಕ್ರಿಯೆಯು ನಡೆಯಲಿರುವುದರಿಂದ ಬದಲಾವಣೆ ಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಕಡ್ಡಾಯವಾಗಿ ಈ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ತಪ್ಪದೇ ಪಾಲ್ಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವರು

ರಿಗೆ:

1) ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ ಕೋರ್ಸುಗಳ ಸಂಯೋಜಕರು, ಮಂಗಳೂರು ವಿಶ್ವವಿದ್ಯಾನಿಲಯ.
2) ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1) ಪ್ರೊ. ಬಿ.ಇಸ್ಮಾಯಿಲ್, ಸಂಯೋಜಕರು, Open Elective ಪತ್ರಿಕೆ ಹಂಚಿಕೆ ಸಮಿತಿ, ಮಂಗಳೂರು ವಿಶ್ವವಿದ್ಯಾನಿಲಯ.
2) ಸಮಿತಿಯ ಸದಸ್ಯರು– ಸದ್ರಿ ಪ್ರಕ್ರಿಯೆಗೆಹಾಜರಾಗಲು ತಿಳಿಸಲಾಗಿದೆ.
3) ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4) ಸಹಾಯಕ ಕುಲಸಚಿವರು, ಶೈಕ್ಷಣಿಕ ವಿಭಾಗ, ಕುಲಸಚಿವರಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.
5) ಅಧೀಕ್ಷಕರು, ಶೈಕ್ಷಣಿಕ ವಿಭಾಗ, ಕುಲಸಚಿವರಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.